ಬ್ಯಾಗ್ಗಿ ಬರತಕ್ಕ ನಾಲವನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಯ ಮೇರೆಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸದಾಸಿವಮೊದಲಿಯಾರ್, ಅರ್ಜೀಯನ್ನು 1885ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 6ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವಿವನಂದ ಮೊದಲಿಯಾರ್ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಜನವರೀ ತಿಂಗಳು 10ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಂ ಜನೆ ಕೊಡೋಣಾಗಿದೆ.

ಸಿ. ಕ್ರೈಸ್,
ಸಬ್ ಜಡ್ಜ್.

---

## ತುಮಕೂರು ಡಿಸ್ಟ್ರಿಕ್ಟ್.

ತಾರೀಖು 14ನೇ ಜನವರೀ 1885.

ಇದರಿಂದ ಸಮಸ್ತ ಜನಗಳಿಗೂ, ತಿಳಿಯಪಡಿಸುವದೇನಂದರೆ, ತಿಪಟೂರು ಸಬ್ ರಿಜಿಸ್ಟ್ರಿ ಆಫೀಸಿನಲ್ಲಿ ಚೇಷ್ಟಾರನಾಗಿ ಇರತಕ್ಕ ಈ ಕೆಳಗೆ ವಿವರಿಸೋಣಾದ ದಸ್ತಾವೇಜನ್ನ ಹಾಜರ್ಮಾಡಿದವರೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾದ ಅಧಿಕಾರ ಹೊಂದಿದ ಮುತಾಲೀಕ ಅಥವಾ ಹಕ್ಕುದಾರರೇ ಆಗಲಿ ಈ ನೋಟೀಸ್ ತಾರೀಖು ಲಾಗಾಯತು ವಂದು ತಿಂಗಳ ವೊಳಗಾಗಿ ಡಿಟೋ ಸಬ್ ರಿಜಿಸ್ಟ್ರಾರ್ರ ರೂಬರೂ ಹಾಜರಾಗಿ ಡಿಟೋ ದಸ್ತಾವೇಜನ್ನು ವಾಪಸು ಪಡಿಯಬೇಕು, ಇದಕ್ಕೆ ತಪ್ಪಿದರೆ ಸ್ಯ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಅನುಸರಿಸಿ ಅದು ನಾಶಪಡಿಸಲ್ಪಡುವದು.

| ದಸ್ತಾವೇಜು ನಂಬರ್. | ದಸ್ತಾವೇಜು ತಾರೀಖು | ದಸ್ತಾವೇಜು ರಿಜಿಸ್ಟ್ರೇಷನ್ ಬಗ್ಗೆನ ಹಾಜರಾದ ತಾರೀಖು. | ದಸ್ತಾವೇಜು ರಿಜಿಸ್ಟಾದ ತಾರೀಖು. | ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ. | ದಸ್ತಾವೇಜನ್ನು ಬರಿಸಿ ಕೊಂಡವರ ಹೆಸರು ಮತ್ತು ವಾಸಸ್ಥಳ. | ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು. |
|---|---|---|---|---|---|---|
| 214 | 24—9—82 | 24—10—82 | 25—10—82 | ಹೊನ್ನವಳ್ಳಿ ತಾಲ್ಲೂಕು (ಹಾಲಿ ತಿಪಟೂರು) ತಿಪಟೂರು ಸಂ॥ ಮೂದಿಪಳ್ಳಿ ಗ್ರಾಮದಲ್ಲಿರುವ ಚಿಕ್ಕಣಂಕಟ್ಟರವಮಗ ಪುಟ್ಟಣ | ಹೊನ್ನವಳ್ಳಿ ತಾಲ್ಲೂಕು (ಹಾಲಿ ತಿಪಟೂರು ತಾಲ್ಲೂಕು) ಈಚನೂರು ಸಮ್ಮತ್ತ ಕೊಪ್ಪದಲ್ಲಿರುವ ವಕ್ಕಲಿಗ ರ ರಂಗಂಣನಮಗಳು ಗಿರಿಯಮ್ಮ | ಕಿಮ್ಮತ್ತು 95 ರೂಪಾಯಿ ಅಂಗಡಿ ಮಳಿಗೆಯನ್ನು ಕ್ರಯಕ್ಕೆ ಕೊಟ್ಟಿರುವದಾಗಿ ವಗ್ಯೆರೆ. |

ಮಹಮ್ಮದಲ್ಲಿ,
ಫೂರ್ ರಿಜಿಸ್ಟ್ರಾರ್.

---

## ಹಾಸನ ಡಿಸ್ಟ್ರಿಕ್ಟ್.

ತಾರೀಖು ನೇ ಜನವರೀ 1885.

ಇದರಿಂದ ಪ್ರಕಟಪಡಿಸುವದೇನಂದರೆ, ಸ್ಯ 1878ನೇ ಇಸವಿ ಜೂ॥ 8ನೇ ಮತ್ತು ಮಿತ ಫಾರೆಸ್ಟ್ ರೂಲ್ಸಿನ ಪೈಕಿ 13ನೇ ರೂಲಿನ ನಿಬಂಧನೆಗಳನುಸರಿಸಿ, ಇದರಡಿ ಕಂಡ ಸ್ಕೇಪ್ ಫಾರೆಸ್ಟ್ಸುಗಳು ಮತ್ತು ಪ್ಲಾಂಟೇಷನ್‌ಗಳು ಸ್ಯ 1885ನೇ ಇಸವಿ ಜನವರೀ ಲಾಗಾಯಿತು ಜೂ॥ ತಿಂಗಳವರಿವಿಗೆ ಯಲ್ಲಾ ತರಗತಿಯ ಬೇಟೆಗಾರರಿಗೂ ಮತ್ತು ಸದರೀ ಫಾರೆಸ್ಟ್ಸುಗಳ ಆಸುಪಾಸ್‌ನಲ್ಲಿರುವ ದನೋಬಸ್ತು ಪ್ಲಾಂಟರುಗಳಿಗೂ ಬಂದು ಮಾಡಲ್ಪಟ್ಟಿವೆ:—

| | |
|---|---|
| 1. ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ವಿಜಾಪುರದ ಪ್ಲಾಂಟೇಷ್ | 1. ಹಾಸನಸಬ್ ಡಿವೀಜ್ನಲ್ಲಿರುವ ಕೆಂಪುಹೊಳೆ ಫಾಟು. |
| 1. ಹಾಸನ ಸಬ್ ಡಿವೀಜ್ನಲ್ಲಿರುವ ಭಕ್ತರವಳ್ಳಿ ಪ್ಲಾಂಟೇಷ್ | 1. ಡಿಟೋ ಕಬ್ಬಿನಹ್ಲಾ ಫಾಟು |
| 1. ಡಿಟೋ ಹಿರೆಕಲ್‌ಗುಡ್ಡದ ಫಾರೆಸ್ಟು | 1. ಡಿಟೋ ಬಿಸಲೆ ಫಾಟು |
| 1. ಡಿಟೋ ಅಣ್ಣೆಬೆಟ್ಟದ ಫಾರೆಸ್ಟು | 1. ಕಾಗನೆರೆ ಫಾಟು |

ಜೆ. ಸ್ಟೀವೆನ್ಸ್,
ಸಬ್ ಅ॥ ಕ್ಯಸರ್‌ವೇಟರ್ ಆಫ್ ಫಾರೆಸ್ಟ್ಸ್.

## ಶಿವಮೊಗ್ಗಾ ಡಿಸ್ಟ್ರಿಕ್ಟು.

### ಇಸ್ತಿಹಾರ್ ನಾಮೆ

ತಾರೀಖು 1ನೇ ಜನವರೀ 1885.

ಇದರಿಂದ ತಿಳಿಸುವದೇನಂದರೆ, ಶಿವಮೊಗ್ಗಾ ಜೈಲ್‌ನಲ್ಲಿ ಬೈದು ಮಾಡಲ್ಪಟ್ಟಿರುವ ಖೈದಿಗಳ ಉಪಯೋಗದ ಬಗ್ಯೆ ಸ್ಯ 1885ನೇ ಇಸವಿ ಏಪ್ರೆಲ್ ಗುರ್ಯೇ ತಾರೀಖು ಮೊದಲು 1886ನೇ ಮಾರ್ಚೀ 31ನೇ ತಾರೀಖುವರಿಗೆ ಎರಡು ದಿನಗಳೂ ಸೇರಿ ಪೇಕಾದ ಆಹಾರ ವ ಗೈರೇ ದರೋಬಸ್ತು ಜಿನಸುಗಳನ್ನೂ ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಯೆ ಬರುವ ಬಂದು ಮಾಡಲ್ಪಟ್ಟ ದರಖಾಸ್ತುಗ ಳನ್ನು ಶಿವಮೊಗ್ಗಾ ಜೈಲ್ ಸೂಪರ್‌ಟೆಂಡೆಂಟರವರು, ಜೈಲ್‌ಗಳ ಇನ್‌ಸ್ಪೆಕ್ಟರ್ ಜನರಲ್ಲವರಿಂದ ಕಾಯಂ ಮಾಡಲ್ಪಡಲಿಕ್ಕೆ ಗುರಿಯಾಗಿ ಸ್ಯ 1885ನೇ ಇಸವಿ ಮಾರ್ಚೀ 1ನೇ ತಾರೀಖು ವರಿಗೆ ತೆಗದುಕೊಳ್ಳುವರು.

2. ಸದರೀ ತಾರೀಖು ತರುವಾಯ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡುವದಿಲ್ಲ.

3. "ಶಿವಮೊಗ್ಗಾ ಜೈಲ್‌ಗಾಗಿ ಆಹಾರ ಪದಾರ್ಥಗಳ ಸರಬರಾಯಿ ಬಗ್ಯೆ ದರಖಾಸ್ತುಗಳು" ಯೆಂಬದಾಗಿ ದರಖಾಸ್ತುಗಳ ಮೇಲೆ ಬರದು ಕಳುಹಿಸತಕ್ಕದ್ದು.

4. 500 ರೂಪಾಯಿಗಳು ನಗದಾಗಿ ಅಥವಾ ಕರ್ನಾಟೀ ನೋಟುಗಳ ಮೂಲಕ ಡಿಪಾಜಿಟೆನೀ ಕಳುಹಿಸಲ್ಪಟ್ಟ ಹೊರ್ತು ಯಾ ವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಶಿವಮೊಗ್ಗಾ ಡಿಸ್ಟ್ರಿಕ್ಟು ಜೈಲ್ ಆಫೀಸಿನಲ್ಲಿ ಹಾಜರಾಗಬೇಕ್ಕೆ ಇಪ್ಪತ್ತನೆಳ್ಳ ದರಖಾಸ್ತುದಾರರ ರೂಬರೂ, ಮೇಲ್ಕಂಡ ತಾರೀಖಿನೊಳಗೆ ಶಿವಮೊಗ್ಗಾ ಡಿಸ್ಟ್ರಿಕ್ಟು ಜೈಲ್ ಸೂಪರ್‌ಟೆಂಡೆಂಟರವರಿಂದ ಖುಲ್ಲಾ ಮಾಡಲ್ಪಡುವವು.

6. ದರೋಬಸ್ತು ದರಖಾಸ್ತುಗಳಲ್ಲಿಯೂ, ಈ ಕೆಳಗೆ ನಮೂದಿಸುವ ತರಗತಿಯ ಪ್ರತಿ ಖೈದಿಗೂ ದಿನ ಬಂದಕ್ಕೆ ಆಗತಕ್ಕ ದರ ವು ನಮೂದಿಸಲ್ಪಡತಕ್ಕದ್ದು.

| | | | | ರೂ. ಆ. ಪೈ. |
|---|---|---|---|---|
| ನೇಟಿವ್ ಕೂಲಿಯವರಾದ ಗಂಡುಸರಿಗೆ | | A ಕ್ಲಾಸ್ | .. .. | |
| ಡಿಟೋ | ಡಿಟೋ | B ,, | .. .. | |
| ಡಿಟೋ | ಡಿಟೋ | C ,, | .. .. | |
| ಹುಡುಗರಾದ ಖೈದೀರು | | | .. .. | |
| ನೇಟಿವ್ ಕೂಲೀ ಮಾಡದ ಗಂಡುಸರು, ಹೆಂಗಸರು, ವಿಚಾರಣೆಯಲ್ಲಿ ಇರತಕ್ಕವರು, | | | | D ಕ್ಲಾಸ್ |
| ಯೂರೋಪಿಯರ್ಜಗಳು ವ ಈಸ್ಟ್ ಇಂಡಿಯರ್ಜಗಳು | | | .. .. | |

7. ದರಖಾಸ್ತು ಮಾಡಲ್ಪಟ್ಟ ದರಗಳು ಆಹಾರ ಜಿನಸೀಗಳ ಸ್ಕೇಲ್ ಪಟ್ಟಿಯಲ್ಲಿ ನಮೂದಿರುವ ಪದಾರ್ಥಗಳು ಮಾತ್ರವಲ್ಲದೆ ಆಸ್ಪತ್ರಿ ಆಹಾರ ಪದಾರ್ಥಗಳು, ಕಾಹಿಲೇ ಮನುಷ್ಯರಿಗೆ ವಿಶೇಷ ಪದಾರ್ಥಗಳು, ನಪ್ಯವಾಗತಕ್ಕ ಪದಾರ್ಥಗಳು, ದೀಪದ ಯಂತ್ರೆ, ಲಾಂದ್ರಗಳು, ಮತ್ತು ಅವೆಗಳ ರಿಪೇರಿ ಮಾಡಿಸುವಣ, ಸ್ನಾನ ಮಾಡಲಿಕ್ಕೆ ಶೀಗೇಕಾಯಿ, ತಮಾಂ ತಾಂಬ್ರ ಪಾತ್ರೆಗಳ ರಿಪೇರಿ ವ ಕಲ್ಲು